ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ

**CC-27/2016**

**CW-65**
**PW-52**

**ಹೆಸರುಃ** **ಶಿವನಗೌಡ**

**ತಂದೆಃ** ಮರಿಗೌಡ್ರು.

**ವಯಸ್ಸುಃ** **72** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಜಿಗಳಿ .

**ಇಂದು ದಿನಾಂಕ:01-03-2025 ರಂದು** ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಶ್ರೀ ಸ.ಸ.ಅ ರವರಿಂದಃ

ಹಾಜರು ಇರುವ ಆರೋಪಿ ಪರಿಚಯ ಇದೆ. 2010 ರಲ್ಲಿ 130 ಚೀಲ ಆರೋಪಿಗೆ ಭತ್ತಕೊಟ್ಟಿದ್ದೆನು. ಅದರ ಮೌಲ್ಯ ಸುಮಾರು ರೂ.1 ಲಕ್ಷದ 10 ಸಾವಿರ ಇತ್ತು. ನನಗೆ ಆರೋಪಿ 12 ಸಾವಿರ ಕೊಟ್ಟಿದ್ದನು. ನಂದಿತಾವರೆಯಲ್ಲಿ ತೂಕ ಮಾಡಿಸಿ, ಶ್ರೀನಿವಾಸ್ ರೈಸ್ ಮಿಲ್ ಗೆ ಕೊಟ್ಟಿದ್ದೆನು. ಆರೋಪಿಯ ಮಿಲ್ ಗೆ ಕೊಟ್ಟಿದ್ದೆನು. ಇನ್ನು ರೂ.97 ಸಾವಿರ ಚಿಲ್ಲರೆ ಹಣ ಆರೋಪಿ ಕೊಡುವುದು ಬಾಕಿ ಇರುತ್ತದೆ. ಆರೋಪಿ ನಂತರದಲ್ಲಿ ಹಣ ವಾಪಸ್ಸು ಕೊಡಲಿಲ್ಲ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆನು. ಸಾಕ್ಷಿಗೆ ಸಂಬಂಧಿಸಿದ ಪಹಣಿಯನ್ನು ನಿ.ಪಿ-44 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು. ಆರೋಪಿ ಪರ ವಕೀಲರು ಗೈರು ಹಾಜರು ಇದ್ದು ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**